ಅಧ್ಯಕ್ಷರು : ನಾನು ಇಲ್ಲಿ ಇರುವಾಗ ತಾವೇಕೆ ಯೋಚನೆ ಮಾಡುತ್ತೀರಿ? ನಾನು ಯಾವಾಗಲೂ ಮಹಿಳೆಯರಿಗೆ ಅಧ್ಯತೆ ಕೊಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ತಾವು ಮಹಿಳೆಯರಿಗೆ ಅಧ್ಯತೆ ಕೊಟ್ಟರೆ ನಮ್ಮ ಗತಿ ಏನು?

ಅಧ್ಯಕ್ಷರು : ಈಗ ಕಬ್ಬುಬೆಳೆಗಾರರ ಸಮಸ್ಯೆ ಬಗ್ಗೆ ಮಾನ್ಯ ಪುಟ್ಟಣ್ಣಯ್ಯ, ಬಿ ಬಿ ಚಿಮ್ಮನಕಟ್ಟಿ, ಹಾಗೂ ನಾಗೇಗೌಡರು ಪ್ರಸ್ತಾಪ ಮಾಡಬಹುದು.

ಶ್ರೀ ಕೆ.ಎಸ್.ಪುಟ್ಟಣಯ್ಯ(ಪಾಂಡವಪುರ) : ಮಾನ್ಯ ಅಧ್ಯಕ್ಷರೇ, ಮಾನ್ಯ ಸಕ್ಕರೆ ಸಚಿವರು ಈ ವಿಷಯವನ್ನು ಬಹಳ ಗಂಭೀರವಾಗಿ ಪರಿಗಣಿಸಬೇಕು. ಇವತ್ತು ಕಬ್ಬಿನ ಸಮಸ್ಯೆ ಏನಾಗಿದೆ ಅಂದರೆ ನನಗೆ ಗೊತ್ತಿರುವ ಹಾಗೆ ಕಳೆದ 15-16 ವರ್ಷಗಳಿಂದ ಕರ್ನಾಟಕ ರಾಜ್ಯದಲ್ಲಿ ಎಲ್ಲಾ ರಾಜಕೀಯ ಪಕ್ಷಗಳ ಸರ್ಕಾರಗಳು ಬಂದು ಸರ್ಕಾರಗಳನ್ನು ರಚನೆ ಮಾಡಿ ಹೋಗಿವೆ. ಆದರೆ ಈ ಸಕ್ಕರೆ ಕಾರ್ಖಾನೆಗಳ ಆಲೋಚನಾ ಕ್ರಮ ಯಾರಿಗೂ ಗೊತ್ತಿಲ್ಲ. ಕಬ್ಬು ಅಂದರೆ ಏನು ಬೆಳೆದ ಕಬ್ಬನ್ನು ಎಷ್ಟು ಸಮಯದವರೆಗೂ ಇಡಬಹುದು ಎನ್ನುವ ಬಗ್ಗೆ ಯಾರೂ ಯೋಚನೆ ಮಾಡುವುದಿಲ್ಲ. ಈಗಾಗಲೇ ಹೆಚ್ಚುವ ಕಬ್ಬಿಗೆ 21-22 ತಿಂಗಳು ಆಗಿದೆ.ಇದರ ಬಗ್ಗೆ ಸರ್ಕಾರ ಯಾವುದೇ ರೀತಿಯ ಗಂಭೀರ ಆಲೋಚನೆ ಮಾಡಿಲ್ಲ. ಕಬ್ಬಿನ ಬಗ್ಗೆ, ಹತ್ತಿಯ ಬಗ್ಗೆ ಹೇಳುವುದಾದರೆ ಕೇಂದ್ರ ಸರ್ಕಾರಕ್ಕೆ, ರಾಜ್ಯ ಸರ್ಕಾರದ ಬೊಕ್ಕಸಕ್ಕೆ ಮೂರನೇ ಒಂದು ಭಾಗದ ಹಣವನ್ನು ಕೊಡುತ್ತಿರುವ ಒಂದು ಕಲ್ಪವೃಕ್ಷ ಆದ್ದರಿಂದ ಸರ್ಕಾರ ದಯಮಾಡಿ ಇದರ ಬಗ್ಗೆ ಗಂಭೀರವಾಗಿ ಪರಿಶೀಲನೆ ಮಾಡಬೇಕು. ಇವತ್ತು ಸರ್ಕಾರ ವಿದೇಶದಿಂದ ಸಕ್ಕರೆಯನ್ನು ತರಿಸಿಕೊಳ್ಳತಕ್ಕಂಥ ಪರಿಸ್ಥಿತಿಗೆ ನಾವು ತಲುಪಿದ್ದೇವೆ. ಆ ಸಕ್ಕರೆಯನ್ನು ನೀವು ನೋಡಿರಬಹುದು ಯಾವ ತರಹ ಆ ಸಕ್ಕರೆ ಇರುತ್ತದೆ ಎಂದು ಇವತ್ತು ಇಡೀ ದೇಶದಲ್ಲಿ ಕಬ್ಬು ಬೆಳೆಯುವಂತಹ ಬೆಳೆಗಾರರ ಬಗ್ಗೆ ಆಲೋಚನೆ ಮಾಡತಕ್ಕಂಥ ಗಂಭೀರವಾದ ಸಮಸ್ಯೆ ಉಂಟಾಗಿದೆ. ಸಹಕಾರಿ ಸಕ್ಕರೆ ಕಾರ್ಖಾನೆಗಳು 17-18 ಇವೆ. ಜಂಟಿ ಕ್ಷೇತ್ರದಲ್ಲಿ 4 ಸಕ್ಕರೆ ಕಾರ್ಖಾನೆಗಳು ಇವೆ. ಖಾಸಗೀ ಕ್ಷೇತ್ರದಲ್ಲಿ 8 ಸಕ್ಕರೆ ಕಾರ್ಖಾನೆಗಳು ಇವೆ. ಒಟ್ಟು ಕರ್ನಾಟಕ ರಾಜ್ಯದಲ್ಲಿರತಕ್ಕಂಥ ಕಬ್ಬು ಸುಮಾರು ಎರಡೂವರೆ ಕೋಟಿ ಟನ್ ಅನ್ನು ಉತ್ಪಾದನೆ ಮಾಡುತ್ತೇವೆ ಎರಡೂವರೆ ಕೋಟಿ ಟನ್ ಕಬ್ಬು ಉತ್ಪಾದನೆ ಮಾಡಿದ್ದರೂ ಕೂಡ ಕರ್ನಾಟಕ ರಾಜ್ಯದಲ್ಲಿರತಕ್ಕಂಥ ಸಕ್ಕರೆ ಕಾರ್ಖಾನೆಗಳು ಕಬ್ಬು ಅರಿಯಲು ಇರುವಂತಹ ಸಾಮರ್ಥ್ಯ ಒಂದು ಕೋಟಿ ಟನ್‌ಗಳು ಮಾತ್ರ. ಉಳಿದ ಕಬ್ಬನ್ನು ಖಂಡಸಾರಿಗಳು ಕ್ರಷರ್ಸ್ ಇನ್ನಿತರೆ ಸಣ್ಣ ಗಾಣಗಳ ಡೀಸಲ್ ಗಾಣಗಳು ಉಪಯೋಸುತ್ತವೆ. ಇನ್ನು ಬೆಳಗಾಂ ಮತ್ತು ಮಂಡ್ಯ ಹಾಗೂ ಬೀದರ್ ಜಿಲ್ಲೆಗಳಲ್ಲಿ ಬಹಳ ಕಬ್ಬು ಉಳಿದು ಕೊಳ್ಳುತ್ತಿದ್ದರೂ ಸಹ ಅದರ ಬಗ್ಗೆ ಆಲೋಚನೆ ಮಾಡುವುದಿಲ್ಲ ಆದ್ದರಿಂದ ನಾನು ಹೇಳುವುದೇನೆಂದರೆ ನೀವು ಏಪ್ರಿಲ್ ತಿಂಗಳಲ್ಲಿ ಎಲ್ಲಾ ಸಕ್ಕರೆ ಕಾರ್ಖಾನೆಗಳ ಮೀಟಿಂಗ್ ಕರೆಯಬೇಕು. ಮೀಟಿಂಗ್ ಕರೆದು ಎಷ್ಟು ಕಬ್ಬು ಇದೆ. ನಿಮ್ಮ ಕಾರ್ಖಾನೆಯಲ್ಲಿ ಎಷ್ಟು ಕಬ್ಬು ಅರಿಯುವ ಸಾರ್ಮಥ್ಯ ಇದೆ ಉಳಿದ ಕಬ್ಬನ್ನು ಏನು ಮಾಡಬೇಕು ಕೆಲವು ಕೈಗಾರಿಕೆಗಳಿಗೆ ಕಬ್ಬು ಇಲ್ಲದೆ ನಿಂತಿವೆ. ಇವತ್ತು

ಗೌರಿಬಿದನೂರು ಸಕ್ಕರೆ ಕಾರ್ಖಾನೆಗೆ ಕಬ್ಬು ಇಲ್ಲದೆ ನಿಂತಿರುವ ಉದಾಹರಣೆ ಇರುವಾಗ ಕಬ್ಬು ಎಲ್ಲಿ ಜಾಸ್ತಿ ಬೆಳೆದಿದ್ದಾರೆ ಆ ಕಬ್ಬನ್ನು ಇಲ್ಲಿಂದ ಅಲ್ಲಿಗೆ ಡೈವರ್ಟ್ ಮಾಡಿ. ಈ ಬಗ್ಗೆ ಚರ್ಚೆ ಮಾಡಬೇಕು ಇಲ್ಲದಿದ್ದರೆ ಕಬ್ಬು ಬೆಳೆಗಾರರಿಗೆ ತುಂಬಾ ತೊಂದರೆಯಾಗುತ್ತದೆ. ಕಾರ್ಖಾನೆಗಳಿಗೆ ನಾವು ಜೂನ್‌ನಿಂದಲೇ ಲೈಸನ್ಸ್ ಕೊಡಬೇಕು. ಆದ್ದರಿಂದ ಮಾನ್ಯ ಅಧ್ಯಕ್ಷರೇ, ಈ ವಿಷಯದಲ್ಲಿ ತಾವು ಸಂಬಂಧಪಟ್ಟ ಮಂತ್ರಿಗಳಿಗೆ ಇದರ ಬಗ್ಗೆ ಪೂರ್ಣ ವಿವರವಾದ ಚರ್ಚೆಯಾಗಬೇಕು. ಹೇಳಿ ಏಪ್ರಿಲ್ ತಿಂಗಳಲ್ಲಿ ಮೀಟಿಂಗ್ ಕರೆಯುವಂತೆ ಸೂಚನೆ ಕೊಡಿ. ಈ ಕೆಲಸ ಜವಾಬ್ದಾರಿಯುತವಾಗಿ ನಡೆಯಬೇಕೆಂದು ಹೇಳಿ ಮಾನ್ಯ ಮಂತ್ರಿಗಳು ಈ ಬಗ್ಗೆ ಗಂಭೀರವಾಗಿ ಹಾಗೂ ಸಮಂಜಸವಾಗಿ ಉತ್ತರ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಎನ್. ನಾಗೇಗೌಡ (ಕಿರುಗಾವಲು) ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ಪುಟ್ಟಣ್ಣಯ್ಯನವರು ಎರಡು ವಿಚಾರಗಳನ್ನು ಬಹಳ ಚೆನ್ನಾಗಿ ಗಂಭೀರವಾಗಿ ಹೇಳಿದ್ದಾರೆ. ಮಂಡ್ಯ ಜಿಲ್ಲೆಯಲ್ಲಿ 40 ಲಕ್ಷ ಟನ್ ಕಬ್ಬು ಇದೆ. ಚಾಮುಂಡಿ ಶುಗರ್ ಕಂಪನಿಯಲ್ಲಿ ಕಬ್ಬು ಅರಿಯುವ ಸಾಮರ್ಥ್ಯ ಇರುವುದು ಶೇಕಡ 48 ಪರ್ಸೆಂಟ್ ಮಾತ್ರ. ಅದಕ್ಕೆ ನಾನು ಸರ್ಕಾರಕ್ಕೆ 3 ಸಲಹೆಗಳನ್ನು ಕೊಡುತ್ತೇನೆ. ಅದೇನೆಂದರೆ ಎಲ್ಲಾ ಸಕ್ಕರೆ ಕಾರ್ಖಾನೆಗಳು ಒಂದು ತಿಂಗಳ ಕಾಲ ಹೆಚ್ಚು ಕಬ್ಬು ಅರೆಯಬೇಕು. ಕಾರಣ ನಾನು ಸಕ್ಕರೆ ಕೈಗಾರಿಕೆಯ ಅಧ್ಯಕ್ಷನಾಗಿ ಕೆಲಸಮಾಡಿರುವ ಹಿನ್ನೆಲೆಯಲ್ಲಿ ಈ ಮಾತನ್ನು ಹೇಳುತ್ತಿದ್ದೇನೆ. ಒಂದು ತಿಂಗಳ ಕಾಲ ಹೆಚ್ಚು ಕಬ್ಬು ಅರೆದರೆ ಈ ಪರಿಸ್ಥಿತಿಯನ್ನು ಸುದಾರಿಸಬಹುದು ಎರಡನೆಯದು ಕ್ರಷರ್ ಲೈಸೆನ್ಸ್ ತೆಗೆದುಕೊಳ್ಳಬೇಕೆಂದು ಏನು ಮಾಡಿದ್ದೀರಿ ಆ ಕ್ರಷರ್ ಲೈಸೆನ್ಸ್ ತೆಗೆದುಕೊಳ್ಳುವುದನ್ನು ರದ್ದು ಮಾಡಿ. ಸಣ್ಣ ಸಣ್ಣ ರೈತರು ಜಿಲ್ಲಾಧಿಕಾರಿಗಳ ಆಫೀಸ್‌ಗೆ ಹೋಗಿ ಕ್ರಷರ್ ಲೈಸೆನ್ಸ್ ತೆಗೆದುಕೊಳ್ಳುವುದಕ್ಕೆ ಬಹಳ ಕಷ್ಟವಾಗುತ್ತದೆ. ಮೂರನೇಯದು ತಾವು ಷುಗರ್ ಡೈರೆಕ್ಟರೇಟ್‌ನಿಂದ ಜೂರಿಸ್‌ಡಿಕ್ಷನ್ ಏನು ಫಿಕ್ಸ್‌ಮಾಡುತ್ತೀರಿ, ಅದನ್ನು ಮಾಡಬೇಡಿ ಕಾರಣ ಒಂದು ರಾಜ್ಯದಿಂದ ಇನ್ನೊಂದು ರಾಜ್ಯಕ್ಕೆ ಕಬ್ಬು ಸಾಗಾಣಿಕೆ ಮಾಡುವಾಗ ಪರವಾನಿಗೆ ಬೇಕಾಗುತ್ತದೆ. ಆದರೆ ಫ್ಯಾಕ್ಟರಿಗಳವರಿಗೆ ಏರಿಯಾ ಫಿಕ್ಸ್ ಮಾಡಿ ಅಷ್ಟು ಅರೆದುಕೊಳ್ಳತಕ್ಕ ಜವಾಬ್ದಾರಿ ಅವರಿಗೆ ಕೊಡಬೇಕು. ಆ ಕಾರ್ಖಾನೆಗಳು ಕಬ್ಬು ಅರೆಯುವ ಸಾಮರ್ಥ್ಯ ಇದ್ದರೆ ಉಪಯೋಗಿಸಿಕೊಳ್ಳುವಂತೆ ಇರಬೇಕು. ಕಾರ್ಖಾನೆಗಳ ವ್ಯಾಪ್ತಿ ಜಾಸ್ತಿ ಮಾಡಿ. ಮುಖ್ಯವಾಗಿ ಏರಿಯಾ ಜುರಿಸ್‌ಡಿಕ್ಷನ್ ತೆಗೆದು ಹಾಕಿ. ಒಂದು ಪಕ್ಷ ಏರಿಯಾ ಜ್ಯುರಿಸ್‌ಡಿಕ್ಷನ್ ಮಾಡಿದರೆ ಆ ಏರಿಯಾದಲ್ಲಿ ರೈತರು ಏನು ಕಬ್ಬು ಬೆಳೆದಿರುತ್ತಾರೆ ಆ ಎಲ್ಲಾ 100 ಪರ್‌ಸೆಂಟ್ ಕಬ್ಬನ್ನು ಕಾರ್ಖಾನೆಯವರು ತೆಗೆದುಕೊಳ್ಳಬೇಕು. ಹಾಗೆ ತಾವು ನಿರ್ದೇಶನ ಕೊಡಬೇಕು.

ಶ್ರೀ ಪಿ.ಸಿ. ಸಿದ್ದನಗೌಡರ್ (ಸಕ್ಕರೆ ರಾಜ್ಯಸಚಿವರು) : ಸನ್ಮಾನ್ಯ ಸಭಾಧ್ಯಕ್ಷರೇ ಹಿರಿಯ ಸದಸ್ಯರಾಗಿರತಕ್ಕಂಥ ಮಾನ್ಯ ನಾಗೇಗೌಡರು ಖಂಡಸಾರಿಗೆ ಲೈಸೆನ್ಸ್ ಕೊಡುವುದನ್ನು ರದ್ದು ಮಾಡಿ ಮತ್ತು ಏರಿಯಾ ಜ್ಯುರಿಸ್‌ಡಿಕ್ಷನ್ ಮಾಡಬೇಡಿ ಎನ್ನುವ ಎರಡು ವಿಷಯಗಳನ್ನು ಹೇಳಿದ್ದಾರೆ. ಇವತ್ತು ಮಧ್ಯಾಹ್ನ 3.00 ಗಂಟೆಗೆ ರಾಜ್ಯದ ಎಲ್ಲಾ ಸಹಕಾರಿ ಸಕ್ಕರೆ ಕಾರ್ಖಾನೆ ಹಾಗೂ ಖಾಸಗೀ ಸಕ್ಕರೆ ಕಾರ್ಖಾನೆಗಳ ಅಧ್ಯಕ್ಷರು

ಮತ್ತು ಎಂ.ಡಿ.ಯವರ ಸಭೆಯನ್ನು ಕರೆಯಲಾಗಿದೆ. ನನ್ನ ದೃಷ್ಟಿಯಲ್ಲಿ ಏರಿಯಾ ಜ್ಯುರಿಸ್‌ಡಿಕ್ಷನ್ ಇರಲೇಬೇಕಾಗುತ್ತದೆ. ಉದಾಹರಣೆಗೆ ಹಿರಿಯೂರಿನಲ್ಲಿ ಒಂದು ಫ್ಯಾಕ್ಟರಿ ಇದೆ. ಈ ರಿಸ್ಟ್ರಿಕ್ಷನ್ ಮಾಡದೇ ಇದ್ದರೆ ಆ ಫ್ಯಾಕ್ಟರಿ ಬಂದ್ ಆಗಿ ಬಿಡುತ್ತದೆ. ಈ ವರ್ಷ ಎರಡೂವರೆ ಕೋಟಿ ಲಕ್ಷ ಟನ್ ಕಬ್ಬು ಬೆಳೆದಿದೆ. ಸಕ್ಕರೆ ಫ್ಯಾಕ್ಟರಿ ತಗೆಯುವ ಬಗ್ಗೆ 6 ಅಪ್ಲಿಕೇಷನ್ ಕೇಂದ್ರ ಸರ್ಕಾರದ ಒಪ್ಪಿಗೆಗಾಗಿ ಕಳುಹಿಸಲಾಗಿದೆ, ಈಗ ಮತ್ತೆ 15 ಅಪ್ಲಿಕೇಷನ್ಸ್ ಬಂದಿವೆ. ಈ ವಿಷಯದ ಬಗ್ಗೆ ವಿವರವಾಗಿ ಉತ್ತರ ನೀಡಬೇಕಾದರೆ ಅರ್ಧ ಗಂಟೆಯಾದರೂ ಅವಕಾಶ ಬೇಕಾಗುತ್ತದೆ. ಅದಕ್ಕಾಗಿ ಈ ಮಧ್ಯಾಹ್ನ ಕರೆದಿರುವ ಸಭೆಯಲ್ಲಿ ಇದರ ಬಗ್ಗೆ ಪೂರ್ಣವಾಗಿ ವಿಚಾರ ಮಾಡುತ್ತೇನೆ.

ಶ್ರೀ ಕೆ.ಎನ್.ನಾಗೇಗೌಡ : ಮಾನ್ಯ ಅಧ್ಯಕ್ಷರೆ, ಇನ್ನೊಂದು ತಿಂಗಳು ಎಲ್ಲಾ ಸಕ್ಕರೆ ಕಾರ್ಖಾನೆಗಳು ಕಬ್ಬು ಅರೆಯಬೇಕೆಂದು ಆದೇಶ ಕೊಡಲಾಗುತ್ತದೆಯೇ ಎಂದು ಮಾನ್ಯ ಸಚಿವರನ್ನು ತಮ್ಮ ಮೂಲಕ ಕೇಳುತ್ತೇನೆ.

ಶ್ರೀ ಪಿ.ಸಿ.ಸಿದ್ದನಗೌಡರ್ : ಆ ರೀತಿ ನಾನು ಆದೇಶ ಕೊಡುತ್ತೇನೆ. ಆದರೆ ಮೆಷಿನರಿಗಳು ಸರಿಯಾಗಿಲ್ಲವೆಂದು ಹೇಳಿದರೆ ನಾನು ಏನೂ ಮಾಡುವುದಕ್ಕಾಗುವುದಿಲ್ಲ. ನಾನು ಕಾರು ಓಡಿಸು ಎಂದು ಹೇಳುತ್ತೇನೆ. ಆದರೆ ಟೆಕ್ನಿಕಲ್ ಆಗಿ ಡಿಫೆಕ್ಟ್ ಇದ್ದರೆ ನಾನು ಏನೂ ಮಾಡುವುದಕ್ಕಾಗುವುದಿಲ್ಲ.

೩. ಖಾಸಗಿ ಐ.ಟಿ.ಐ ಗಳಿಗೆ ಅನುದಾನ

ಶ್ರೀ ಬಿ.ಬಿ.ಚಿಮ್ಮನಕಟ್ಟಿ : (ಬಾದಾಮಿ) : ಮಾನ್ಯ ಸಭಾಧ್ಯಕ್ಷರೆ, ರಾಜ್ಯದ ಅನೇಕ ಪ್ರೈವೇಟ್ ಐ.ಟಿ.ಐ ಕಾಲೇಜಿನ ಸಿಬ್ಬಂದಿ ವರ್ಗದವರು ನ್ಯಾಯ ಕೊಡಬೇಕೆಂದು ಹರಿತಾಳ ಮತ್ತು ಹೋರಾಟ ಮಾಡುತ್ತಿದ್ದಾರೆ. ಈ ಬಗ್ಗೆ ಸರ್ಕಾರಕ್ಕೆ ಅನೇಕ ಸಾರಿ ಮನವಿಗಳನ್ನು ಕೂಡ ಕೊಟ್ಟಿದ್ದಾರೆ ಈ ಬೇಡಿಕೆಯನ್ನು ಈಡೇರಿಸುವ ಬಗ್ಗೆ ಮಾನ್ಯ ಸಿಂಧ್ಯಾರವರು ಹಾಗೂ ಮಾನ್ಯ ದೇಶಪಾಂಡೆಯವರು ವಿರೋಧ ಪಕ್ಷದಲ್ಲಿ ಕುಳಿತಿದ್ದಂಥ ಸಂದರ್ಭದಲ್ಲಿ ಒತ್ತಾಯ ಮಾಡಿದ್ದರು. ಇದು ಬಹಳ ಪ್ರಮುಖವಾದ ವಿಚಾರ. ಗ್ಯಾಂಟ್ ಇನ್ ಎಯ್ಡ್ ಕೋಡ್ ಒಳಗೆ ನಮ್ಮನ್ನು ಒಳಪಡಿಸಿಕೊಂಡು ಪೂರ್ತಿ ಪಗಾರವನ್ನು ಕೊಡಿ ಎಂದು ಎಂಟು ಹತ್ತು ವರ್ಷಗಳಿಂದ ಕೇಳುತ್ತಾ ಬಂದಿದ್ದರೂ ಸರ್ಕಾರದವರು ಒಂದು ಪೈಸೆ ಅನುದಾನವನ್ನೂ ಕೊಟ್ಟಿಲ್ಲ. ಅವರು ಕೇಳತಕ್ಕಂಥ ಪ್ರಶ್ನೆ ಜೆನಿಯನ್ ಇದೆ. ಇದರ ಬಗ್ಗೆ ಸನ್ಮಾನ್ಯ ಕರಂಬಳ್ಳಿ ಸಂಜೀವಶೆಟ್ಟರು ವಿಧಾನ ಪರಿಷತ್ತಿನಲ್ಲಿ ಪ್ರಶ್ನೆ ಕೇಳಿದಾಗ ಗ್ಯಾಂಟ್ ಇನ್ ಏಡ್ ಕೋಡ್ ಒಳಗೆ ಸೇರಿಸಲಾಗುತ್ತದೆಂದು ಒಪ್ಪಿಗೆ ಕೊಟ್ಟಿದ್ದಾರೆ ಹಾಗೂ ಇದರ ಬಗ್ಗೆ ಸಂಪುಟದಲ್ಲೂ ತೀರ್ಮಾನವಾಗಿದೆ. ಆದುದರಿಂದ ಮಾನ್ಯ ಲೇಬರ್ ಮಿನಿಸ್ಟರ್‌ರವರು ಇದರ ಬಗ್ಗೆ ಒತ್ತಾಯ ಕೊಟ್ಟು ಸಂಪುಟದಲ್ಲಿ ತೆಗೆದುಕೊಂಡಿರತಕ್ಕಂಥ ನಿರ್ಣಯವನ್ನು ಆದಷ್ಟು ಶೀಘ್ರ ಹೊರಡಿಸಿಕೊಟ್ಟರೆ ಐ.ಟಿ.ಐಯಗಳಲ್ಲಿ ಕೆಲಸ ಮಾಡುವವರಿಗೆ ಜೀವನ ಮಾಡಲು ಅನುಕೂಲ ಮಾಡಿಕೊಟ್ಟ ಹಾಗಾಗುತ್ತದೆ.

ಶ್ರೀ ಬಿ.ಎಸ್.ಯುಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ನಾನು ಕಾಲಿಂಗ್ ಅಟೆನ್‌ಷನ್ ಕೂಡ ಹಾಕಿದ್ದೆ. ಗ್ರಾಮಾಂತರ ಪ್ರದೇಶದ ಮಕ್ಕಳು,